ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

ಸಂಖ್ಯೆ : No. ಬೆಂ.ಅ.ಪ್ರಾ/ನಮ/ಅ.ಸ/ಅ.ಅ-5/ತಾ.ಸ-4/ಪೂ/62/2025-26

ದಿನಾಂಕ : Date : 07.01.2026

ಅಭಿಯಂತರ ಸದಸ್ಯರವರ ಕಛೇರಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಅನುಸೂಚಿ-ಎ 5
(ಉಪವಿಧಿ ಸಂಖ್ಯೆ:4.1)

# ನಕ್ಷೆ ಮಂಜೂರಾತಿ ಪತ್ರ

ಶ್ರೀಮತಿ/ಶ್ರೀ

**M/s Collab Projects LLP
Sy No 31/1, C/o Mana capital
Sarjapura Road, chikkannalli
Bengaluru-560 035.**

ಮಾನ್ಯರೆ,

ಅರ್ಜಿದಾರರಾದ ತಾವು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ, ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಚಿಕ್ಕವಡೇರಪುರ ಗ್ರಾಮದ ಸರ್ವೆ ನಂ. 38/2, 38/3, 38/4, 38/5, 39/7, 39/8, 39/9, 39/10, 40/2, 40/4, 40/5, 40/6, 41/1, 41/2, 41/3, 41/4, 41/5, 41/6, 42/1, 42/2 ರಲ್ಲಿನ 17ಎಕರೆ 00ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡಕ್ಕೆ ನಕ್ಷೆ ಮಂಜೂರಾತಿ ನೀಡಲು ಕೋರಿರುತ್ತೀರಿ,

ಸದರಿ ಕಟ್ಟಡಗಳಿಗೆ ನಕ್ಷೆ ಮಂಜೂರಾತಿ ನೀಡಲು ಅಭಿಯಂತರ ಸದಸ್ಯರವರ ಕಛೇರಿ ಆದೇಶ ಸಂಖ್ಯೆ: 1326, ದಿನಾಂಕ: 18.12.2025 ರಂದು ಅನುಮೋದನೆ ನೀಡಿದ್ದು, ನಕ್ಷೆ ಮಂಜೂರಾತಿ ಶುಲ್ಕಗಳನ್ನು ಚಲನ್ ಸಂಖ್ಯೆ: GN25127249, ದಿನಾಂಕ: 24.12.2025 ರಂದು ಒಟ್ಟು ರೂ. 9,92,98,050/- ಗಳನ್ನು ಪಾವತಿಸಲಾಗಿರುತ್ತದೆ.

ಅದರಂತೆ ದಿನಾಂಕ: 07.01.2026 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ವಿವರಗಳು ಈ ಕೆಳಕಂಡಂತೆ ಇರುತ್ತವೆ.

| ಗ್ರಾಮ | ಸರ್ವೆ ನಂ. | ಟವರ್ | ಅಂತಸ್ತು | ಎತ್ತರ | ಉದ್ದೇಶ | ಘಟಕ |
|---|---|---|---|---|---|---|
| ಚಿಕ್ಕವಡೇರಪುರ | 38/2, 38/3, 38/4, 38/5, 39/7, 39/8, 39/9,39/10, 40/2, 40/4, 40/5, 40/6, 41/1, 41/2, 41/3, 41/4, 41/5, 41/6, 42/1, 42/2 | ಟವರ್-1 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 132 |
| | | ಟವರ್-2 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 131 |
| | | ಟವರ್-3 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 131 |
| | | ಟವರ್-4 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 132 |
| | | ಟವರ್-5 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 132 |
| | | ಟವರ್-6 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 131 |
| | | ಟವರ್-7 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 131 |
| | | ಟವರ್-8 | 3ತಳ+ನೆಲ+33ಮೇಲಂತಸ್ತು | 102.45ಮೀ | ವಸತಿ | 132 |
| | | | | | ಒಟ್ಟು | 1052 |

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಪುಟ ಸಂಖ್ಯೆ: 2 ಕ್ಕೆ ಮುಂದುವರೆದಿದೆ...

ಮೇಲ್ಕಂಡ ಕಟ್ಟಡಕ್ಕೆ ನೀಡಿರುವ ನಕ್ಷೆ ಮಂಜೂರಾತಿಯು ದಿನಾಂಕ: **07.01.2026** ರಿಂದ ದಿನಾಂಕ: **06.01.2028** ವರೆಗಿನ ಎರಡು ವರ್ಷಗಳ ಅವಧಿಗೆ ಮಾತ್ರ ಮಾನ್ಯತೆ ಪಡೆದಿರುತ್ತದೆ.

ಈ ಕೆಳಕಂಡ ಷರತ್ತುಗಳನ್ನು ವಿಧಿಸಿ ಮಂಜೂರಾತಿ ನೀಡಲಾಗಿದೆ ಎಂದು ಈ ಮೂಲಕ ತಿಳಿಯಪಡಿಸಿದೆ.

**–:ಷರತ್ತುಗಳು:–**

1) ಪ್ರಾಧಿಕಾರದ ಸಮಿತಿ ಸಭೆಯ ಠರಾವು ಸಂಖ್ಯೆ: 5.4.1/**2025**, ದಿನಾಂಕ: **19.07.2025** ರಲ್ಲಿ ಅನುಮೋದಿಸಲಾಗಿದ್ದು, ಅದರಂತೆ ಅರ್ಜಿದಾರರು ಪ್ರಾಧಿಕಾರಕ್ಕೆ ಅಭಿವೃದ್ಧಿ ಯೋಜನಾ ಶುಲ್ಕಗಳನ್ನು ಪಾವತಿಸಿದ್ದು. ಹೀಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾರ್ಯಾದೇಶ ಸಂಖ್ಯೆ: ಬೆಂ.ಅ.ಪ್ರಾ/ನಯೋಸ/**DLP-18/2916/2025-26**, ದಿನಾಂಕ: **31.10.2025** ವಸತಿ ಮತ್ತು ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಯನ್ನು ನೀಡಲಾಗಿದ್ದು, ಸದರಿ ಕಾರ್ಯಾದೇಶದಲ್ಲಿನ ಷರತ್ತುಗಳ ಕ್ರಮ ಸಂಖ್ಯೆ: **01** ರಿಂದ **25** ರವರೆಗೆ ವಿಧಿಸಿರುವ ಎಲ್ಲಾ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

2) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರು ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ **CTE-350250, PCB ID-282442, INW ID-337344**, ದಿನಾಂಕ **20.08.2025** ರಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವುದು.

3) ವಾಯುಯಾನ ಪ್ರಾಧಿಕಾರದಿಂದ ನೀಡಿರುವ ನಿರಾಕ್ಷೇಪಣಾ ಪತ್ರ ಸಂಖ್ಯೆ **HOSU/SOUTH/B/051925/1716060**, ದಿನಾಂಕ **01.08.2025** ರಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸುವುದು.

4) ಕಟ್ಟಡದ ಕಾಮಗಾರಿಯ ಆರ್.ಸಿ.ಸಿ ಕಂಬಗಳು ನೆಲಮಟ್ಟಕ್ಕೆ ಎತ್ತರಿಸಿದ ನಂತರ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

5) ಅನುಮೋದಿತ ಅಭಿವೃದ್ಧಿ ನಕ್ಷೆಯಲ್ಲಿ ಯಾವ ಉದ್ದೇಶಕ್ಕಾಗಿ ಗುರುತಿಸಿರುವ ಪ್ರದೇಶಗಳು ಅಂದರೆ ಉದ್ಯಾನವನ, ಬಯಲು ಜಾಗ, ರಸ್ತೆಗಳು, ಸರ್ಫೇಸ್ ಪಾರ್ಕಿಂಗ್ ಪ್ರದೇಶಗಳನ್ನು ಬೇರೆ ಯಾವುದೇ ಉದ್ದೇಶಕ್ಕಾಗಿ ಬಳಸುವಂತಿಲ್ಲ.

6) ಪ್ರಾಧಿಕಾರದಿಂದ ಮಂಜೂರಾದ ಕಟ್ಟಡ ನಕ್ಷೆಯಂತೆಯೇ ಉದ್ದೇಶಿತ ಕಟ್ಟಡಕ್ಕೆ ನಡುಜಾಗಗಳನ್ನು ಬಿಟ್ಟು ಯಾವುದೇ ಉಲ್ಲಂಘನೆ ಮಾಡದೇ ಕಟ್ಟಡ ನಿರ್ಮಾಣವನ್ನು ಪೂರ್ಣಗೊಳಿಸುವ ಷರತ್ತಿಗೊಳಪಡಿಸಿದೆ. ತಪ್ಪಿದಲ್ಲಿ ಮಂಜೂರಾದ ನಕ್ಷೆಯನ್ನು ಯಾವುದೇ ಮುನ್ಸೂಚನೆ ನೀಡದೇ ರದ್ದುಪಡಿಸಲಾಗುವುದು ಹಾಗೂ ನಕ್ಷೆ ಮಂಜೂರಾತಿ ಪ್ರತಿಯನ್ನು ಕಟ್ಟಡ ನಿರ್ಮಾಣ ಮಾಡುವ ಸ್ಥಳದಲ್ಲಿ ಪ್ರದರ್ಶಿಸತಕ್ಕದ್ದು.

7) ಬಂಡಿದಾರಿ/ರಾಜಕಾಲುವೆ/ಮಳೆನೀರು ಚರಂಡಿ ಇನ್ನೂ ಯಾವುದೇ ತರಹದ ಖರಾಬು ಜಮೀನು ಸದರಿ ಜಮೀನಿನ ವಿಸ್ತೀರ್ಣದಲ್ಲಿ ಇದ್ದಲ್ಲಿ ಆ ಪ್ರದೇಶವನ್ನು ಯಾವುದೇ ತರಹದ ನಿರ್ಮಾಣದ ಕಾರ್ಯವನ್ನು ಮಾಡುವಂತಿಲ್ಲ ಹಾಗೂ ಇತರ ಯಾವುದೇ ಉದ್ದೇಶಕ್ಕಾಗಿ ಉಪಯೋಗಿಸತಕ್ಕದ್ದಲ್ಲ ಮತ್ತು ಅಂತಹ ಪ್ರದೇಶಕ್ಕೆ ಸೂಕ್ತ ರಕ್ಷಣೆ ಒದಗಿಸುವುದು.

8) ಅರ್ಜಿದಾರರು ಕಟ್ಟಡದ ಕಾಮಗಾರಿ ಪ್ರಾರಂಭಿಸುವ ಮುನ್ನ ಸದರಿ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುವ ಕಾರ್ಮಿಕರುಗಳಿಗೆ ಶೌಚಾಲಯವನ್ನು ಕಡ್ಡಾಯವಾಗಿ ನಿರ್ಮಿಸತಕ್ಕದ್ದು. ಇಲ್ಲವಾದಲ್ಲಿ ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗುವುದಿಲ್ಲ ಹಾಗೂ ನೀಡಲಾಗಿರುವ ನಕ್ಷೆ ಮಂಜೂರಾತಿಯನ್ನು ಯಾವುದೇ ಮುನ್ಸೂಚನೆ ಇಲ್ಲದೇ ರದ್ದುಗೊಳಿಸಲಾಗುವುದು.

9) ಕಟ್ಟಡ ನಿರ್ಮಾಣ ಸಮಯದಲ್ಲಿ ಸುತ್ತಮುತ್ತಲಿನ ಪ್ರದೇಶಕ್ಕೆ ಅನಗತ್ಯ ಶಬ್ದ ಮಾಲಿನ್ಯ ತಡೆಗಟ್ಟುವ ಸಂಬಂಧ ನಿರ್ಮಾಣದ ಹೊರಭಾಗಗಳಿಗೆ ಅಗತ್ಯ ರಕ್ಷಣಾ ಕವಚವನ್ನು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ನಿಯಂತ್ರಣ ಮಂಡಳಿಯವರ ಸಲಹೆ ಪಡೆದು ಕಡ್ಡಾಯವಾಗಿ ಅಳವಡಿಸತಕ್ಕದ್ದು.

10) ಅರ್ಜಿದಾರರು ಪ್ರಶ್ನಿತ ಪ್ರದೇಶದಲ್ಲಿ ಕಾಮಗಾರಿ ಮುಕ್ತಾಯದ ನಂತರ ಸ್ವಾಧೀನಾನುಭವ ಪತ್ರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯವಿರುತ್ತದೆ.

ಪುಟ ಸಂಖ್ಯೆ: 3 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

11) ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದಂತೆ ವಿವಿಧ ಇಲಾಖೆಗಳು ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಿದ ಷರತ್ತುಗಳನ್ನು ಚಾಚೂ ತಪ್ಪದೇ ಪಾಲಿಸುವುದು. ತಪ್ಪಿದಲ್ಲಿ ಸ್ವಾಧೀನಾನುಭವ ಪತ್ರ **(Occupation Certificate)** ಪಡೆಯುವ ನಿಮ್ಮ ಕೋರಿಕೆಯನ್ನು ಪರಿಗಣಿಸಲಾಗುವುದಿಲ್ಲ.

12) ಅಭಿವೃದ್ಧಿದಾರರು ಭದ್ರತಾ ಸಿಬ್ಬಂದಿಯವರನ್ನು ನೇಮಿಸಿ ಕಟ್ಟಡದ ಪ್ರವೇಶ ದ್ವಾರದಲ್ಲಿ ಒಳಬರುವ ಹಾಗೂ ಹೊರಹೋಗುವ ವಾಹನಗಳಿಗೆ ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿ ಸಾರ್ವಜನಿಕರಿಗೆ ಹಾಗೂ ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳುವುದು.

13) ಕಟ್ಟಡ ಮಂಜೂರಾತಿಯ ಕುರಿತು ಕಾರ್ಮಿಕ ಇಲಾಖೆ ಅಥವಾ ಪ್ರಾಧಿಕಾರ, ನಿರ್ದೇಶನ ನೀಡಿದಲ್ಲಿ ಅರ್ಜಿದಾರರು ವ್ಯತ್ಯಾಸದ ಹಣವನ್ನು ಭರಿಸತಕ್ಕದ್ದು.

14) ಕಟ್ಟಡ ನಿರ್ಮಾಣ ವೆಚ್ಚವು ಪ್ರತೀ ಚದರ ಮೀಗೆ **14690/-** ಕ್ಕಿಂತ ಹೆಚ್ಚಾದಲ್ಲಿ ಕಾರ್ಮಿಕ ಕಲ್ಯಾಣ ನಿಧಿಗೆ ಅಂದಾಜು ಮೊತ್ತದ ಶೇ **01** % ರಷ್ಟು ಮೊತ್ತವನ್ನು ಪ್ರಾಧಿಕಾರಕ್ಕೆ ಭರಿಸತಕ್ಕದ್ದು.

15) ಅರ್ಜಿದಾರರು ಕಟ್ಟಡ ನಕ್ಷೆ ಮಂಜೂರಾತಿ ಸಮಯದಲ್ಲಿ ಬಾಕಿ ಇರುವ ಯಾವುದೇ ಅಭಿವೃದ್ಧಿ ಶುಲ್ಕ ಅಥವಾ ಇನ್ನಾವುದೇ ಶುಲ್ಕಗಳನ್ನು ಬಿಬಿಎಂಪಿ/ಬಿಡಿಎ ಸಂಸ್ಥೆಗಳಿಗೆ ಕಟ್ಟಡ ಪ್ರಾರಂಭಿಸುವ ಮೊದಲು ಸಂದಾಯ ಮಾಡತಕ್ಕದ್ದು.

16) ಯೋಜನೆಯಲ್ಲಿ ಇಬ್ಬಗೆಯ ಕೊಳವೆ ವಿಧಾನವನ್ನು ಕುಡಿಯುವ ನೀರಿಗಾಗಿ ಹಾಗೂ ಇತರೆ ಉದ್ದೇಶಿತ ವ್ಯವಸ್ಥೆಗಾಗಿ ಅಳವಡಿಸುವುದು.

17) ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಚಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

18) ಸದರಿ ಕಟ್ಟಡಕ್ಕೆ ವಿದ್ಯುತ್ ಚಕ್ತಿ ವ್ಯವಸ್ಥೆಯನ್ನು BESCOM ವತಿಯಿಂದ ಕಲ್ಪಿಸತಕ್ಕದ್ದು & ಅರ್ಜಿದಾರರು ಕಟ್ಟಡಕ್ಕೆ ಬೇಕಾದ ವಿದ್ಯುಚ್ಚಕ್ತಿಯ ಪರ್ಯಾಯ ವ್ಯವಸ್ಥೆಗಾಗಿ ಸೋಲಾರ್ ಉಪಕರಣಗಳನ್ನು ಅಳವಡಿಸಿಕೊಳ್ಳತಕ್ಕದ್ದು.

19) ಕಟ್ಟಡದ ಗುಣಮಟ್ಟ, ಸುರಕ್ಷತೆ ಹಾಗೂ ವಿನ್ಯಾಸಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಯಾವುದೇ ರೀತಿಯಿಂದ ಜವಾಬ್ದಾರರಾಗಿರುವುದಿಲ್ಲ. ಈ ಅಂಶಗಳ ಪೂರ್ಣ ಜವಾಬ್ದಾರಿಯು ಅಭಿವೃದ್ಧಿದಾರರದ್ದೇ ಆಗಿರುತ್ತದೆ.

20) ಯೋಜನೆಯಲ್ಲಿ ಮಳೆ ನೀರು ಕೊಯ್ಲುಗಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಂಡು ಗೃಹ ಹಾಗೂ ಇನ್ನಿತರೆ ಉಪಯೋಗಗಳಿಗಾಗಿ ಬಳಸಲು ಅವಕಾಶ ಕಲ್ಪಿಸಿಕೊಳ್ಳತಕ್ಕದ್ದು.

21) ಅಭಿವೃದ್ಧಿದಾರರು ಒಳಚರಂಡಿ ವ್ಯವಸ್ಥೆ ಕಾಮಗಾರಿಯನ್ನು ಸಂಬಂಧಪಟ್ಟ ಇಲಾಖೆಗೆ **(BWSSB)** ನಿಗಧಿಪಡಿಸಿದ ಹಣವನ್ನು ಸಂದಾಯ ಮಾಡಿ ಇಲಾಖೆಯವರ ಮಾರ್ಗದರ್ಶನದಲ್ಲಿ ನಿರ್ವಹಿಸುವುದು.

22) ಅರ್ಜಿದಾರರು **Occupancy Certificate** ಅನ್ನು ಪಡೆಯಲು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸುವ ಸಮಯದಲ್ಲಿ ನೀರು ಸರಬರಾಜು ಕಾಮಗಾರಿಗಳು **Sewage Treatment Plant** ಹಾಗೂ **Rain Water Harvesting** ಅನ್ನು ನಿಯಮಕ್ಕನುಗುಣವಾಗಿ ನಿರ್ವಹಿಸಿರುವ ಬಗ್ಗೆ **BWSSB** ಯಿಂದ ದೃಢೀಕರಣ ಪತ್ರವನ್ನು ಸಲ್ಲಿಸುವುದು. ಹಾಗೆಯೇ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ಸಹ ಯೋಜನೆಯ ಸಮರ್ಪಕ ಅನುಷ್ಠಾನದ ಬಗ್ಗೆ ದೃಢೀಕರಣ ಪತ್ರವನ್ನು ಸಲ್ಲಿಸುವುದು.

23) **ಅಭಿವೃದ್ಧಿದಾರರು ಕಟ್ಟಡದ ಆವರಣಗಳಲ್ಲಿನ ಗಿಡ ಮರಗಳನ್ನು ಬೆಳೆಸಿ ಪರಿಸರವನ್ನು ಸಂರಕ್ಷಿಸುವ ಷರತ್ತಿಗೆ ಬದ್ಧರಾಗಿರತಕ್ಕದ್ದು.**

24) ಅರ್ಜಿದಾರರು ಯಾವುದೇ ರೀತಿಯ ಪ್ಲಾಸ್ಟಿಕ್, ಪೇಪರ್, ಗಾರ್ಬೇಜ್ ಇತ್ಯಾದಿ ತ್ಯಾಜ್ಯಗಳನ್ನು ಸಂಗ್ರಹಿಸಿ **Dry waste** ಮತ್ತು **Wet waste** ಅನ್ನು ಬೇರ್ಪಡಿಸಿ ನಿಗಧಿತ ಸ್ಥಳಕ್ಕೆ ಸಾಗಿಸಲು ಸೂಕ್ತ ವ್ಯವಸ್ಥೆಯನ್ನು ಕಡ್ಡಾಯವಾಗಿ ಮಾಡಿಕೊಳ್ಳತಕ್ಕದ್ದು.

25) ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಬೆಂಗಳೂರು ರವರ ಇಲಾಖೆಗಳಿಂದ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

26) ಅರ್ಜಿದಾರರು ನೀರು ಸರಬರಾಜಿಗಾಗಿ ಸಂಬಂಧಪಟ್ಟ ಇಲಾಖೆಯನ್ನು **(BWSSB)** ಅವಲಂಬಿಸದೇ ನೀರಿಗಾಗಿ ತಮ್ಮ ಸ್ವಂತ ವ್ಯವಸ್ಥೆ ಮಾಡಿಕೊಳ್ಳುವುದು.

27) BESCOM ಇಲಾಖೆಯಿಂದ ನೀಡಿರುವ ಪತ್ರದಲ್ಲಿ ವಿಧಿಸಿದ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

ಪುಟ ಸಂಖ್ಯೆ: 4 ಕ್ಕೆ ಮುಂದುವರೆದಿದೆ...

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

28) ಅಭಿವೃದ್ಧಿದಾರರು ವಿದ್ಯುತ್ ಶ್ಚಕ್ತಿ ಟ್ರಾನ್ಸ್ ಫಾರ್ಮರ್ ಗಳನ್ನು ಮಂಜೂರಾದ ನಕ್ಷೆಯಲ್ಲಿ ತೋರಿಸಿದಂತೆ ಮೀಸಲಿರಿಸಿದ ಜಾಗದಲ್ಲಿಯೇ ಅದನ್ನು ಸ್ಥಾಪಿಸುವುದು.

29) ಅರ್ಜಿದಾರರು ಕಟ್ಟಡ ನಿರ್ಮಾಣ ಸಮಯದಲ್ಲಿ ಕಟ್ಟಡ ನಿರ್ಮಾಣ ಸಾಮಗ್ರಿಗಳಿಂದಾಗಲೀ ಇನ್ನಾವುದೇ ಸಾಮಗ್ರಿಗಳಿಂದಾಗಲೀ ಸಾರ್ವಜನಿಕರಿಗೆ ಹಾಗೂ ಪರಿಸರಕ್ಕೆ ಯಾವುದೇ ತೊಂದರೆಯಾಗದಂತೆ ಸೂಕ್ತ ಬ್ಯಾರಿಕೇಂಡಿಂಗ್ ವ್ಯವಸ್ಥೆ ಮಾಡಿಕೊಂಡು ನಿರ್ಮಾಣ ಕಾರ್ಯ ಕೈಗೊಳ್ಳತಕ್ಕದ್ದು, ತಪ್ಪಿದ್ದಲ್ಲಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು.

30) ಅರ್ಜಿದಾರರು ನಕ್ಷೆ ಮಂಜೂರಾತಿ ಸಂಬಂಧ ಜಮೀನಿನ ಮಾಲಿಕತ್ವದ ಬಗ್ಗೆ ಯಾವುದೇ ತಪ್ಪು ಮಾಹಿತಿ/ದಾಖಲಾತಿ ಸಲ್ಲಿಸಿರುವುದು ಕಂಡುಬಂದಲ್ಲಿ, ಮಾಲೀಕತ್ವದ ಬಗ್ಗೆ ನ್ಯಾಯಾಲಯದಲ್ಲಿ ತಕರಾರು ಉದ್ಭವವಾದಲ್ಲಿ ನಕ್ಷೆ ಮಂಜೂರಾತಿಯನ್ನು ರದ್ದುಗೊಳಿಸುವ ಅಥವಾ ಹಿಂಪಡೆಯುವ ಅಧಿಕಾರವನ್ನು ಕೆಟಿಸಿಪಿ ಕಾಯ್ದೆ ಕಲಂ 76 (ಂ) ರಡಿಯಲ್ಲಿ ಪ್ರಾಧಿಕಾರದ ಆಯುಕ್ತರು ಅಧಿಕಾರ ಹೊಂದಿದ್ದು ಅದರಂತೆ ಕ್ರಮ ಜರುಗಿಸಲಾಗುವುದು.

31) ಕಟ್ಟಡ ನಿರ್ಮಾಣದ ಸಮಯದಲ್ಲಿ ಸೆಂಟ್ರಿಂಗ್ ಅಥವಾ ಇನ್ನಿತರೆ ಕಾರಣಗಳಿಂದ ಏನಾದರೂ ಅನಾಹುತ ಸಂಭವಿಸಿದಲ್ಲಿ ಅದಕ್ಕೆ ಅರ್ಜಿದಾರರು ಸಂಪೂರ್ಣ ಜವಾಬ್ದಾರರಾಗಿರುತ್ತಾರೆ. ನಕ್ಷೆ ಮಂಜೂರಾತಿ ನೀಡಿದ ಇಲಾಖೆಯು ಜವಾಬ್ದಾರರಾಗಿರುವುದಿಲ್ಲ. ಆದುದರಿಂದ ನಿರ್ಮಾಣ ಸಮಯದಲ್ಲಿ ಎಲ್ಲಾ ಜಾಗೃತ / ಸುರಕ್ಷಿತ ಕ್ರಮಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನೀಡಲಾಗಿರುವ ನಕ್ಷೆ ಮಂಜೂರಾತಿ ಯಾವ ಮುನ್ಸೂಚನೆ ಇಲ್ಲದೇ ರದ್ದುಗೊಳಿಸಲಾಗುವುದು.

32) ಪ್ರಶ್ನಿತ ಪ್ರದೇಶದಲ್ಲಿ **240.0ಚ.ಮೀ FAR** ಪ್ರದೇಶಕ್ಕೆ ಒಂದು ಮರದಂತೆ ವಿವಿಧ ಜಾತಿ ಗಿಡ, ಮರಗಳನ್ನು ಬೆಳೆಸಿ ಅಭಿವೃದ್ಧಿಪಡಿಸುವುದು.

33) ಅಭಿವೃದ್ಧಿದಾರರು ವಾಹನ ನಿಲುಗಡೆಯ ಸ್ಥಳದಲ್ಲಿ ಕಡ್ಡಾಯವಾಗಿ ವಿದ್ಯುತ್ ವಾಹನಗಳಿಗೆ ಚಾರ್ಜಿಂಗ್ ಪಾಯಿಂಟ್ ಗಳನ್ನು ಅಳವಡಿಸತಕ್ಕದ್ದು.

34) ಅಭಿವೃದ್ಧಿದಾರರು ಸಿಟಿ ಮಾಸ್ಟರ್ ಪ್ಲಾನ್ ಗಳಲ್ಲಿ ವಿದ್ಯುತ್ ವಾಹನಗಳ ಚಾರ್ಜಿಂಗ್ ಗಳಿಗೆ ಸೂಕ್ತವಾದ ಮೀಸಲು ಸ್ಥಳಗಳನ್ನು ಕಾಯ್ದಿರಿಸತಕ್ಕದ್ದು.

35) ನೀರು ಸರಬರಾಜುಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಯಿಂದ ನಿರಾಕ್ಷೇಪಣಾ ಪತ್ರ ಪಡೆದು ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಪಡೆದು ಸಲ್ಲಿಸುವುದು.

36) ಅಗ್ನಿಶಾಮಕ ಇಲಾಖೆಯಿಂದ ಪಡೆದಿರುವ ನಿರಾಕ್ಷೇಪಣಾ ಪತ್ರವನ್ನು ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅನುಮೋದನೆ ಕೋರುವ ಮುನ್ನ ಪಡೆದು ಸಲ್ಲಿಸುವುದು.

37) **SEIAA** ರವರಿಂದ ಪಡೆದ ನಿರಾಕ್ಷೇಪಣಾ ಪತ್ರವನ್ನು ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅನುಮೋದನೆ ಕೋರುವ ಮುನ್ನ ಪಡೆದು ಸಲ್ಲಿಸುವುದು.

38) ಪ್ರಸ್ತಾಪಿತ ಪ್ರದೇಶದಲ್ಲಿ ಕಾಯ್ದಿರಿಸಿರುವ **2932.37** ಚ.ಮೀ ರಸ್ತೆ ವಿಸ್ತರಣಾ ಪ್ರದೇಶ ಉದ್ಯಾನವನ ಮತ್ತು ಬಯಲು ಜಾಗಗಳ ಪ್ರದೇಶವನ್ನು ನೊಂದಾಯಿತ ಪರಿತ್ಯಾಜನಾ ಪತ್ರದ ಮೂಲಕ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವ ಮುನ್ನ ಸಲ್ಲಿಸುವ ಷರತ್ತಿಗೊಳಪಟ್ಟಿರುತ್ತದೆ.

39) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಆಗಿಂದಾಗ್ಗೆ ವಿಧಿಸುವ ಷರತ್ತುಗಳಿಗೆ ಅರ್ಜಿದಾರರು ಬದ್ಧರಾಗಿರತಕ್ಕದ್ದು.

ಆಯುಕ್ತರ ಪರವಾಗಿ,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು

ಯಥಾಪ್ರತಿಯನ್ನು, ಕಾರ್ಯಪಾಲಕ ಅಭಿಯಂತರು, ಪೂರ್ವ ವಿಭಾಗ, ನಗರಾಭಿವೃದ್ಧಿಭವನ, **KUIDFC**, ಇಂದಿರಾನಗರ, ಬೆಂಗಳೂರು ರವರ ಮಾಹಿತಿಗಾಗಿ ರವಾನಿಸಿದೆ.